

# सरयू ಸರಯೂ
## ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly Regn. No. KARKAN/2014/62363
**December Vol. : 11 Issue : 7** 5126/ ಕ್ರೋಧಿ ಸಂವತ್ಸರ ದಶಂಬರ್ 2024 ಪುಟ 8 **Rs. 10/-**

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24

## ಅಂತರ್ ಕಾಲೇಜು ಮಟ್ಟದ 'ಉತ್ಕರ್ಷ' ಫೆಸ್ಟ್– ಶೈಕ್ಷಣಿಕ ಸ್ಪರ್ಧಾ ಕಾರ್ಯಕ್ರಮ 08.11.2024








ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದಲ್ಲಿ ಪದವಿ ಪೂರ್ವ ವಿಭಾಗದ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾದ ಅಂತರ್ ಕಾಲೇಜು ಮಟ್ಟದ "ಉತ್ಕರ್ಷ" ಫೆಸ್ಟ್– ಶೈಕ್ಷಣಿಕ ಸ್ಪರ್ಧಾ ಕಾರ್ಯಕ್ರಮವು ತಾ. ರಂದು ಅತ್ಯದ್ಭುತವಾಗಿ ನಡೆಯಿತು. ಬೆಳಿಗ್ಗೆ 10 ಗಂಟೆಗೆ ಇದರ ಉದ್ಘಾಟನಾ ಸಮಾರಂಭವು ದೀಪ ಪ್ರಜ್ವಲನದೊಂದಿಗೆ ನಡೆದಿದ್ದು, ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ, ಶ್ರೀರಾಮ ವಿದ್ಯಾ–ಕೇಂದ್ರದ ಸಂಸ್ಥಾಪಕರೂ ಮಾರ್ಗದರ್ಶಕರೂ ಆದ ಡಾ. ಪ್ರಭಾಕರ ಭಟ್ ಕಲ್ಲಡ್ಕ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಬಂಟ್ವಾಳ– ಪುತ್ತೂರು ತಾಲೂಕುಗಳ 9 ಪದವಿಪೂರ್ವ ಕಾಲೇಜುಗಳ 350 ವಿದ್ಯಾರ್ಥಿಗಳು ಭಾಗವಹಿಸಿದ್ದರು.



**ಬೆಂಗಳೂರು ಪ್ರವಾಸ : 11.11.2024 ರಿಂದ 13.11.2024**

5, 6 ಮತ್ತು 7ನೇ ತರಗತಿಯ ವಿದ್ಯಾರ್ಥಿಗಳಿಗೆ ಬೆಂಗಳೂರು ಪ್ರವಾಸ ಹಮ್ಮಿಕೊಂಡಿದ್ದು, ಬೆಂಗಳೂರಿನ ವಂಡರ್‌ಲಾ, ಕೋಲಾರದ ಕೋಟಿಲಿಂಗ, ಅಂತರಗಂಗೆ, ಕೋಲಾರಮ್ಮ ದೇವಸ್ಥಾನ, ಸೋಮೇಶ್ವರ ದೇವಸ್ಥಾನ ಹಾಗೂ ಚಿಕ್ಕಬಳ್ಳಾಪುರದ ಆದಿಯೋಗಿ ಕ್ಷೇತ್ರಕ್ಕೆ ಭೇಟಿ ನೀಡಿದರು. ಒಟ್ಟು 90 ವಿದ್ಯಾರ್ಥಿಗಳು ಹಾಗೂ 8 ಅಧ್ಯಾಪಕರು ಭಾಗವಹಿಸಿದರು.



**ಕೇರಳ ಪ್ರವಾಸ : 16.11.2024**

5, 6 ಮತ್ತು 7ನೇ ತರಗತಿಯ ವಿದ್ಯಾರ್ಥಿಗಳಿಗೆ ಪರಶಿನಿ ಕಡವು ಮುತ್ತಪ್ಪ ದೇವಾಲಯ, ವಿಸ್ಮಯ ವಾಟರ್ ಪಾರ್ಕ್, ನ್ಯಾಷನಲ್ ಸ್ನೇಕ್ ಪಾರ್ಕ್ ಗೆ ಏರ್ಪಡಿಸಲಾಗಿತ್ತು. 207 ವಿದ್ಯಾರ್ಥಿಗಳು, 10 ಅಧ್ಯಾಪಕರು, ಇಬ್ಬರು ಕಛೇರಿ ಸಿಬ್ಬಂದಿಗಳು ಹಾಗೂ ಇಬ್ಬರು ಸಹಾಯಕಿಯರು ಭಾಗವಹಿಸಿದ್ದರು.

### ದೀಪಾವಳಿ ಹಬ್ಬವನ್ನು ಆಚರಣೆ 4.11.2024



ಈ ಕಾರ್ಯಕ್ರಮಕ್ಕೆ ಶಿಶುಮಂದಿರದ ಆಡಳಿತ ಮಂಡಳಿಯ ವ್ಯವಸ್ಥಾಪಕರಾದ ಶ್ರೀಮತಿ ಸುಧಾ ಭಟ್ ಆಗಮಿಸಿ ದೀಪಾವಳಿಯ ಮಹತ್ವವನ್ನು ಕಥೆಯ ಮೂಲಕ ತಿಳಿಸಿಕೊಟ್ಟರು.

ಶ್ರೀಗಣೇಶ ಶಿಶುಮಂದಿರ ಬೊಂಡಾಲ, ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿ, ಶ್ರೀಕೃಷ್ಣ ಶಿಶುಮಂದಿರ ಸಜೀಪ ಕಂದೂರು, ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಬಿ.ಸಿ ರೋಡು ಇಲ್ಲಿ ದೀಪಾವಳಿ ಹಬ್ಬ ಆಚರಣೆ ಮಾಡಲಾಯಿತು. ಮಕ್ಕಳು ದೀಪವನ್ನು ಬೆಳಗಿಸಿ ಭಜನೆಯನ್ನು ಮಾಡಿದರು. ನಂತರ ಸಿಹಿ ನೀಡಲಾಯಿತು.

### ಪಾಲಕರ ಸಭೆ 9.11.2024



ಶ್ರೀ ಗಣೇಶ ಶಿಶುಮಂದಿರದಲ್ಲಿ ಪಾಲಕರ ಸಭೆ ನಡೆಯಿತು. ಮಾರ್ಗದರ್ಶಕರಾಗಿ ಶ್ರೀಯುತ ಶಿವಗಿರಿ ಸತೀಶ್ ಇವರು ಆಗಮಿಸಿದರು. ಕಮಿಟಿ ಸದಸ್ಯರಾದ ಶ್ರೀಯುತ ಜನಾರ್ಧನ್ ಕುಲಾಲ್ ಇವರು ಉಪಸ್ಥಿತರಿದ್ದರು. ಒಟ್ಟು 9 ಮಂದಿ ಪಾಲಕರು ಭಾಗವಹಿಸಿದರು

### ವಿದ್ಯಾಕೇಂದ್ರ ಸಂಚಾಲಿತ ಶಿಶುಮಂದಿರಗಳ ಅಭಿವೃದ್ಧಿ ಸಮಿತಿ ಬೈಠಕ್ 11.11.2024



ಶ್ರೀರಾಮ ಶಿಶುಮಂದಿರ, ಶ್ರೀ ಗಣೇಶ ಶಿಶುಮಂದಿರ ಬೊಂಡಾಲ, ಶ್ರೀಕೃಷ್ಣ ಶಿಶುಮಂದಿರ ಕಂದೂರು, ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು, ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿ ಶಿಶುಮಂದಿರಗಳ ಅಭಿವೃದ್ಧಿ ಸಮಿತಿ ಬೈಠಕ್ ನಡೆಯಿತು. ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ । ಪ್ರಭಾಕರ್ ಭಟ್ ಕಲ್ಲಡ್ಕ ಮಾರ್ಗದರ್ಶನ ಮಾಡಿದರು. ವಿದ್ಯಾ- ಕೇಂದ್ರದ ಸಂಚಾಲಕರು ಶ್ರೀ ವಸಂತ ಮಾಧವ, ಕಾರ್ಯನಿರ್ವಾಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್, ಸಮಿತಿಯ ಸದಸ್ಯರು, ಮಾತಾಜಿಯವರು ಉಪಸ್ಥಿತರಿದ್ದರು.

### ಸಾಮೂಹಿಕ ತುಳಸಿ ಪೂಜೆ 13.11.2024



ಶ್ರೀರಾಮ ಶಿಶುಮಂದಿರದಲ್ಲಿ ನಡೆದ ಸಾಮೂಹಿಕ ತುಳಸಿ ಪೂಜೆ ಮತ್ತು ಗೋ ಪೂಜೆಯನ್ನು ಕಶೆಕೋಡಿ ಸೂರ್ಯನಾರಾಯಣ ಭಟ್ ಇವರು ನಡೆಸಿಕೊಟ್ಟರು. ಡಾ । ಕಮಲಾ ಪ್ರಭಾಕರ್ ಭಟ್ ಇವರು ಪ್ರಧಾನ ತುಳಸಿ ಪೂಜೆಯನ್ನು ನೆರವೇರಿಸಿದರು. ಶಿಶುಮಂದಿರದ ಮಕ್ಕಳ ಪಾಲಕರೇ ಮನೆಯಲ್ಲಿ ಬೆಳೆಸಿ ತಂದ ತುಳಸಿ ಗಿಡಕ್ಕೆ ಪಾಲಕರು ಮತ್ತು ಮಕ್ಕಳು ಕುಳಿತು ಸಾಮೂಹಿಕವಾಗಿ ಪೂಜೆಯನ್ನು ನೆರವೇರಿಸಿದರು. ಡಾ । ಪ್ರಭಾಕರ್ ಭಟ್ ಕಲ್ಲಡ್ಕ, ಲಕ್ಷ್ಮೀ ಗಣೇಶ್ ಹೋಟೆಲ್ ನ ಮಾಲಿಕರಾದಂತಹ ರಾಜೇಂದ್ರ ಹೊಳ್ಳ, ಸಂಸ್ಥೆಯ ಹಿರಿಯರು ಉಪಸ್ಥಿತರಿದ್ದರು, ಶ್ರೀರಾಮ ಪದವಿಪೂರ್ವ ವಿಭಾಗದ ಇತಿಹಾಸ ಉಪನ್ಯಾಸಕರಾದ ಶ್ರೀಯುತ ರಮೇಶ್ ಇವರು ಆಗಮಿಸಿ ತುಳಸಿ ಮತ್ತು ಗೋ ಪೂಜೆಯ ಮಹತ್ವವನ್ನು ತಿಳಿಸಿದರು.

ಶ್ರೀ ಗಣೇಶ ಶಿಶುಮಂದಿರ ಬೊಂಡಾಲದಲ್ಲಿ ನಡೆದ ತುಳಸಿ ಪೂಜೆಯನ್ನು ಶ್ರೀ ಅನಂತ ಭಟ್ ಪಳನೀರು ಇವರು ನೆರವೇರಿಸಿ ಪೂಜೆಯ ಮಹತ್ವವನ್ನು ತಿಳಿಸಿ ಕೊಟ್ಟರು. ಪಾಲಕರು, ಕಮಿಟಿ ಸದಸ್ಯರು ಮತ್ತು ಮಕ್ಕಳು ಭಾಗವಹಿಸಿದ್ದರು.

ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿ ಇಲ್ಲಿ ತುಳಸಿ ಪೂಜೆ, ಗೋ ಪೂಜೆ ಮತ್ತು ಗಿಡ ನೆಡುವ ಕಾರ್ಯಕ್ರಮ ನಡೆಯಿತು.

ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಇಲ್ಲಿ ಸಾಮೂಹಿಕ ತುಳಸಿ ಪೂಜೆಯನ್ನು ಭಜನೆ ಮಾಡುವುದರ ಮೂಲಕ ಪ್ರಾರಂಭಿಸಲಾಯಿತು ಚಂಡಿಕಾಪರಮೇಶ್ವರಿ ದೇವಸ್ಥಾನದ ಅರ್ಚಕರಾದ ಶ್ರೀ ಮಹೇಶ್ ಭಟ್ ಇವರ ನೇತೃತ್ವದಲ್ಲಿ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಗೀತಾ ಇವರು ಪ್ರಧಾನ ತುಳಸಿ ಪೂಜೆಯನ್ನು ನೆರವೇರಿಸಿದರು . ಅರ್ಚಕರು ತುಳಸಿ ಪೂಜೆ- ಯ ಮಹತ್ವವನ್ನು ತಿಳಿಸಿದರು, ಆಡಳಿತ ಮಂಡಳಿಯ ಕೋಶಾಧಿಕಾರಿ ಶ್ರೀ ಸತೀಶ್ ಶಿವಗಿರಿ ಮಾರ್ಗದರ್ಶನ ನೀಡಿದರು.

ಶ್ರೀಕೃಷ್ಣ ಶಿಶುಮಂದಿರದಲ್ಲಿ ತುಳಸಿ ಪೂಜೆಯನ್ನು ಶ್ರೀ ಸುಬ್ರಮಣ್ಯ ತಂತ್ರಿಯವರು ನಡೆಸಿಕೊಟ್ಟರು. ಶ್ರೀಮತಿ ಸುಧಾ ಸೂರ್ಯನಾರಾಯಣ ಭಟ್ ಕಶೆಕೋಡಿ ಇವರ ಮಾರ್ಗದರ್ಶನದಲ್ಲಿ ಪಾಲಕರ ಸಭೆಯು ನಡೆಯಿತು.

### ಹೊರಸಂಚಾರ 15.11.2024

ಶ್ರೀ ಗಣೇಶ ಶಿಶುಮಂದಿರ ಬೊಂಡಾಲ ಮತ್ತು ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿಯ ಮಕ್ಕಳ ಹೊರಸಂಚಾರವು ಶ್ರೀ ಮಹಾಗಣಪತಿ ದೇವಸ್ಥಾನ ಕೊಯಿಲ, ವೀರಭದ್ರ ದೇವಸ್ಥಾನ ಸಂಗಬೆಟ್ಟು, ಕೊಡ್ಯಾಡ್ಕ ಅನ್ನಪೂರ್ಣೇಶ್ವರಿ ದೇವಸ್ಥಾನ ಮತ್ತು ಸಾವಿರಕಂಬ ಬಸದಿಗೆ ಆಯೋಜಿಸಲ್ಪಟ್ಟಿತ್ತು. 29 ಮಂದಿ ಭಾಗವಹಿಸಿದ್ದರು.

### ಹೊರಸಂಚಾರ 15.11.2024



ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಮಕ್ಕಳ ಹೊರಸಂಚಾರ ಆರೋಜಿಸಿದ್ದೆವು. ಮೊದಲಿಗೆ ಕನ್ಯಾಡಿ ರಾಮಕ್ಷೇತ್ರಕ್ಕೆ ಭೇಟಿ ನೀಡಿ ಅಲ್ಲಿಯೇ ಉಪಹಾರ ಮುಗಿಸಿ. ನಂತರ ಸೌತಡ್ಕ ಮಹಾಗಣಪತಿ ದೇವರ ದರ್ಶನ ಪಡೆದು ಅನ್ನಪ್ರಸಾದ ಸೇವಿಸಿ ಅಲ್ಲಿಂದ ಶಿಶಿಲೇಶ್ವರ ದೇವಸ್ಥಾನಕ್ಕೆ ಹೋಗಿ ಹಿಂತಿರಿಗಿದೆವು ಒಟ್ಟು 12 ಮಕ್ಕಳು ಪಾಲ್ಗೊಂಡಿದ್ದರು

## ಪ್ರಾಥಮಿಕ ಶಾಲೆ

### ಜಿಲ್ಲಾ ಮಟ್ಟದ ಗಾಯನ ಸ್ಪರ್ಧೆ : 1.11.2024



ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಪುತ್ತೂರು ತಾಲೂಕು ಘಟಕದ ಸಹಯೋಗದೊಂದಿಗೆ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನಡೆಸಿದ ಜಿಲ್ಲಾ ಮಟ್ಟದ ಕನ್ನಡ ಪರ ಗೀತೆಗಳ ಗಾಯನ ಸ್ಪರ್ಧೆ ಮಧುರ ಮಧುರವೀ ಕನ್ನಡ ಗಾನ ಕಾರ್ಯಕ್ರಮದಲ್ಲಿ 7ನೇ ತರಗತಿಯ ಮಾನಸ ಭಾಗವಹಿಸಿದ್ದಾರೆ.

### ಕನ್ನಡ ಭಾಷಣ ಸ್ಪರ್ಧೆಯಲ್ಲಿ ಪ್ರಥಮ : 1.11.24




ಬಂಟ್ವಾಳ ಲಯನ್ಸ್ ಕ್ಲಬ್ ವತಿಯಿಂದ ಕನ್ನಡ ಭಾಷಣ ಸ್ಪರ್ಧೆಯಲ್ಲಿ 7ನೇ ತರಗತಿಯ ನಿನಾದ್ ಕೈರಂಗಳ ಪ್ರಥಮ ಸ್ಥಾನ ಪಡೆದು- ಕೊಂಡಿದ್ದಾರೆ.

## ಸುಭಾಷಿತ ಮಂಜರಿ

ಸ್ವಭಾವಸುಂದರಂ ವಸ್ತು
ನ ಸಂಸ್ಕಾರಮಪೇಕ್ಷತೇ ।
ಮುಕ್ತಾರತ್ನಸ್ಯ ಶಾಣಾಶ್ಮ–
ಘರ್ಷಣಂ ನೋಪಯುಜ್ಯತೇ ॥
(ದೃಷ್ಟಾಂತಕಲಿಕಾ)

ಸಹಜಸುಂದರವಾದ ವಸ್ತುವಿಗೆ ಮತ್ತೆ ಸಂಸ್ಕಾರವೇನೂ ಬೇಕಾಗುವುದಿಲ್ಲ. ಮುತ್ತನ್ನು ಸಾಣೆಕಲ್ಲಿನಲ್ಲಿ ಉಜ್ಜುವುದು ಅನಾವಶ್ಯಕ.

### ಸಂಪಾದಕೀಯ

ಶೈಕ್ಷಣಿಕ ವ್ಯವಸ್ಥೆಯ 75% ಕಾರ್ಯಚಟುವಟಿಕೆಗಳು ಮುಕ್ತಾಯಗೊಂಡಿದ್ದು ಆಯಾ ಪೈಕಿ ಶಾಲಾ ವಾರ್ಷಿಕೋತ್ಸವದ ಅಂಗವಾಗಿ ನಡೆಯುವ ಕ್ರೀಡೋತ್ಸವ ಈಗಾಗಲೇ ಸಂಪನ್ನಗೊಂಡಿದ್ದು, ಇದರ ವರದಿ ಮುಂದಿನ ಸಂಚಿಕೆಯಲ್ಲಿ ಬರಲಿದೆ. ಇದರೊಂದಿಗೆ ಶೈಕ್ಷಣಿಕ ಪ್ರವಾಸಗಳು ವಿದ್ಯಾಸಂಸ್ಥೆಯ ಎಲ್ಲಾ ವಿಭಾಗಗಳಲ್ಲಿ ನಡೆದಿದ್ದು ವಿದ್ಯಾಸಂಸ್ಥೆಯ 80% ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸುವಂತೆ ಯೋಜನೆ ಮಾಡಲಾಗಿತ್ತು. ಕನ್ಯಾಕುಮಾರಿಯಿಂದ ಉತ್ತರ ಭಾರತದ ವಾರಣಾಸಿ, ಅಯೋಧ್ಯೆಯ ವರೆಗೆ ಈ ಪ್ರವಾಸ ಯೋಜನೆಯಾಗಿತ್ತು.

ಇದಲ್ಲದೆ ಶೈಕ್ಷಣಿಕವಾಗಿ ಸಾಂಸ್ಕೃತಿಕ, ಕ್ರೀಡೆ ಹಾಗೂ ವಿವಿಧ ಫೆಸ್ಟ್‌ಗಳನ್ನೂ ವಿದ್ಯಾಸಂಸ್ಥೆಯಲ್ಲಿ ಆಯೋಜನೆ ಮಾಡಿ ಹೊರಗಿನ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ನಮ್ಮ ವ್ಯವಸ್ಥೆಯಲ್ಲಿ ಭಾಗವಹಿಸುವಂತೆ ಯೋಜನೆ ಮಾಡಿದ್ದು ಈ ತಿಂಗಳ ವಿಶೇಷ. ಈ ಎಲ್ಲಾ ವರದಿಗಳೊಂದಿಗೆ ಈ ಬಾರಿಯ ಸರಯೂ ಬಂದಿದೆ.

ವಂದನೆಗಳೊಂದಿಗೆ

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಶ್ರೀಮತಿ (ಶಿಶುಮಂದಿರ)
ಚೈತ್ರಾ (ಪ್ರಾಥಮಿಕ ಶಾಲೆ)
ಮೇಘಶ್ರೀ (ಪ್ರೌಢಶಾಲೆ)
ಶ್ವೇತಾ (ಪಿಯುಸಿ)
ಸೌಮ್ಯ (ಸೆಕೆಂಡರಿ ಸ್ಕೂಲ್)
ರಶ್ಮಿತಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಮೂರು


**ಜಿಲ್ಲಾ ಮಟ್ಟಕ್ಕೆ ಆಯ್ಕೆ : 6.11.2024**



ಶಾಂತಿವನ ಟ್ರಸ್ಟ್(ರಿ) ಧರ್ಮಸ್ಥಳ ಇದರ ವತಿಯಿಂದ ನಡೆದ ತಾಲೂಕು ಮಟ್ಟದ ಸ್ಪರ್ಧೆಯಲ್ಲಿ 7ನೇ ತರಗತಿಯ ರಾಜೇಶ್ವರಿ ಭಟ್ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, 7ನೇ ತರಗತಿಯ ನಿನಾದ್ ಕೈರಂಗಳ ಚಿತ್ರಕಲೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ ಭಾಷಣ ಸ್ಪರ್ಧೆಯಲ್ಲಿ 7ನೇ ತರಗತಿಯ ಸುಶ್ಮಿತಾ ಭಟ್ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

**ಭಜನೆ ಹಾಗೂ ಸಾಮೂಹಿಕ ಹುಟ್ಟಹಬ್ಬ : 9.11.24**



ಭಜನೆ ಹಾಗೂ ಅಕ್ಟೋಬರ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬವನ್ನು ಸಾಮೂಹಿಕವಾಗಿ ಆಚರಿಸಲಾಯಿತು. ಶ್ರೀರಾಮ ಪದವಿ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಶ್ರೀಮತಿ ರಶ್ಮಿತಾ ದಿನದ ಮಹತ್ವವನ್ನು ತಿಳಿಸಿದರು. ನಂತರ 7ನೇ ತರಗತಿಯ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ ನಡೆಯಿತು.

ಅಧ್ಯಾಪಕ ವೃಂದದವರು ಹುಟ್ಟುಹಬ್ಬ ಆಚರಿಸಿಕೊಳ್ಳುವ ಮಕ್ಕಳಿಗೆ ಆರತಿ ಬೆಳಗಿ, ಅಕ್ಷತೆ ಹಾಕಿ, ತಿಲಕಧಾರಣೆ ಮಾಡಿ, ಸಿಹಿ ನೀಡಿದರು. ವಿದ್ಯಾರ್ಥಿಗಳು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ, ನಿಧಿ ಸಮರ್ಪಿಸಿದರು.

ವೇದಿಕೆಯಲ್ಲಿ ಹಿರಿಯ ಅಧ್ಯಾಪಕರಾದ ಅನ್ನಪೂರ್ಣ ಎನ್ ಭಟ್ ಉಪಸ್ಥಿತರಿದ್ದರು.

**ಜಿಲ್ಲಾ ಮಟ್ಟಕ್ಕೆ ಆಯ್ಕೆ : 9.11.2024**



ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಸತ್ಯಸಾಯಿ ಲೋಕಸೇವಾ ಪ್ರೌಢಶಾಲೆ, ಅಳಿಕೆಯಲ್ಲಿ ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಚಿತ್ರಕಲೆ ಸ್ಪರ್ಧೆಯಲ್ಲಿ 7ನೇ ತರಗತಿಯ ನಿನಾದ್ ಕೈರಂಗಳ ಮತ್ತು 4ನೇ ತರಗತಿಯ ನಿಹಾರಿಕ ಪ್ರಥಮ, ಆಶುಭಾಷಣ ಸ್ಪರ್ಧೆಯಲ್ಲಿ 7ನೇ ತರಗತಿಯ ಬಿನಿತ್ ಪ್ರಥಮ, ಸಂಸ್ಕೃತ ಕಂಠಪಾಠ 7ನೇ ತರಗತಿಯ ರಾಜೇಶ್ವರಿ ಭಟ್ ಪ್ರಥಮ , ಕನ್ನಡ ಕಂಠಪಾಠ 4ನೇ ತರಗತಿಯ ಗೌರಿನಂದಿನಿ ದ್ವಿತೀಯ, ಸಂಸ್ಕೃತ ಧಾರ್ಮಿಕ ಪಠಣ 6ನೇ ತರಗತಿಯ ಅಪ್ರಮೇಯ ತೃತೀಯ ಸ್ಥಾನವನ್ನು ಪಡೆದುಕೊಂಡಿರುತ್ತಾರೆ. ಪ್ರಥಮ ಸ್ಥಾನ ಪಡೆದ ನಿನಾದ್ ಕೈರಂಗಳ , ಬಿನಿತ್ ಮತ್ತು ರಾಜೇಶ್ವರಿ ಭಟ್ ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

**ತಾಲೂಕು ಮಟ್ಟದ ಚಿತ್ರಕಲಾ ಸ್ಪರ್ಧೆ : 14.11.24**




ಉದಯವಾಣಿ ಪತ್ರಿಕೆಯವರು ನಡೆಸಿದ ದ.ಕ ಜಿಲ್ಲಾ ಮಟ್ಟದ 'ಚಿಣ್ಣರ ಬಣ್ಣ 2024' ಚಿತ್ರಕಲಾ ಸ್ಪರ್ಧೆಯಲ್ಲಿ ಸಬ್ ಜೂನಿಯರ್ ವಿಭಾಗದಲ್ಲಿ ನಿಧಿ ಕೈರಂಗಳ ಪ್ರಥಮ ಸ್ಥಾನ, ಜೂನಿಯರ್ ವಿಭಾಗದಲ್ಲಿ ನಿನಾದ್ ಕೈರಂಗಳ ಪ್ರಥಮ ಸ್ಥಾನ, ಹಾಗೂ 4ನೇ ತರಗತಿಯ ನಿಹಾರಿಕ ಎಂ. ಮೆಚ್ಚುಗೆಯ ಬಹುಮಾನ ಪಡೆದಿದ್ದಾರೆ.

**ಮಿನಿ ಒಲಂಪಿಕ್ಸ್‌ನಲ್ಲಿ ಕಂಚಿನ ಪದಕ: 17.11.24**



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಕರ್ನಾಟಕದ ಮೂರನೇ ಮಿನಿ ಒಲಂಪಿಕ್ಸ್‌ನಲ್ಲಿ ಜೂಡೋ ಮಾರ್ಷಲ್ ಆರ್ಟ್ ಸ್ಪರ್ಧೆಯಲ್ಲಿ ದ.ಕ ಜಿಲ್ಲೆಯನ್ನು ಪ್ರತಿನಿಧಿಸಿದ್ದ 6ನೇ ತರಗತಿಯ ಅನನ್ಯ ಆರ್ ಕಂಚಿನ ಪದಕದೊಂದಿಗೆ ತೃತೀಯ ಸ್ಥಾನ ಪಡೆದುಕೊಂಡಿದ್ದಾಳೆ.

**ಛದ್ಮವೇಷ ಸ್ಪರ್ಧೆಯಲ್ಲಿ ಪ್ರಥಮ: 18.11.2024**



ಶುಭೋದಯ ವಿದ್ಯಾಲಯ, ಮೂಡುಶೆಡ್ಡೆ ಇವರು ಆಯೋಜಿಸಿದ "ಶ್ರೀ ರಾಮ ವೈಭವ" ಎಂಬ ಛದ್ಮವೇಷ ಸ್ಪರ್ಧೆಯಲ್ಲಿ 1ನೇ ತರಗತಿಯ ಅಹಾನ್ ಚಂದ್ರ ಪ್ರಥಮ ಸ್ಥಾನ ಪಡೆದುಕೊಂಡಿದ್ದಾನೆ.

**ಕಿರುಕಥಾ ಸ್ಪರ್ಧೆಯಲ್ಲಿ ಪ್ರಥಮ: 18.11.2024**

ಸತ್ಯಶಾಂತ ಪ್ರತಿಷ್ಠಾನ(ರಿ) ಮುರ, ಪುತ್ತೂರು ಇವರು ನಡೆಸಿದ ಜೂನಿಯರ್ ವಿಭಾಗದ ಕಿರುಕಥಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು 7ನೇ ತರಗತಿಯ ನಿನಾದ್ ಕೈರಂಗಳ ಪಡೆದುಕೊಂಡಿದ್ದಾನೆ

**ವಾರ್ಷಿಕ ಕ್ರೀಡಾಕೂಟ : 22.11.2024**



2024–25ನೇ ಶೈಕ್ಷಣಿಕ ವರ್ಷದ ವಾರ್ಷಿಕ ಕ್ರೀಡಾಕೂಟಕ್ಕೆ ಭಾರತೀಯ ಸೇನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯ ಹಿರಿಯ ವಿದ್ಯಾರ್ಥಿಯಾಗಿದ್ದ ಶ್ರೀ ಯೋಗೀಶ್ ಧ್ವಜಾರೋಹಣ ಮಾಡಿದರು. 3ನೇ ತರಗತಿಯಿಂದ 7ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ವೈಯುಕ್ತಿಕ ಆಟಗಳಾದ 100ಮೀ 200ಮೀ 400ಮೀ 600ಮೀ ಉದ್ದ ಜಿಗಿತ, ಎತ್ತರ ಜಿಗಿತ, ಗುಂಡೆಸೆತ, ಚಕ್ರ ಎಸೆತ ಆಟಗಳನ್ನು ನಡೆಸಲಾಯಿತು. ಉದ್ಘಾಟನ ವೇದಿಕೆಯಲ್ಲಿ ಉದ್ಯಮಿಗಳೂ, ಕಾಂಪ್ರೈಲು ಶ್ರೀ ಉಳ್ಳಾಲ್ತಿ ಅಮ್ಮನವರ ಕ್ಷೇತ್ರದ ವ್ಯವಸ್ಥಾಪಕ ಸಮಿತಿಯ ಅಧ್ಯಕ್ಷ ಶ್ರೀ ಜಯಾನಂದ ಆಚಾರ್ಯ, ಸರ್ಕಾರಿ ಪರ ವಕೀಲರಾದ ಶಿವಗಿರಿ ಸತೀಶ್ ಭಟ್ ಹಾಗೂ ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

**ಹೆಣ್ಣು ಮಕ್ಕಳಿಗೆ ಮಾಹಿತಿ ಕಾರ್ಯಗಾರ : 23.11.24**



7ನೇ ತರಗತಿಯ ವಿದ್ಯಾರ್ಥಿನಿಯರಿಗೆ ವೈಯಕ್ತಿಕ ಸ್ವಚ್ಛತೆ ಕುರಿತಾಗಿ ಮಾಹಿತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯಿತು. ವೇದಾವತಿ ಮಾತಾಜಿ ಹಾಗೂ ಅನ್ನಪೂರ್ಣ ಮಾತಾಜಿ ಈ ಬಗ್ಗೆ ಮಾಹಿತಿ ನೀಡಿದರು.

**ಪ್ರಾಂತ ಶಿಶುವಾಟಿಕ ಆಚಾರ್ಯ ಸಮ್ಮೇಳನ : 23 ಮತ್ತು 24 ನವೆಂಬರ್**




ಹುಣಸೂರಿನ ಶಾಸ್ತ್ರೀ ಪಬ್ಲಿಕ್ ಸ್ಕೂಲ್‌ನಲ್ಲಿ ಪೂರ್ವಗುರುಕುಲದ ಅಧ್ಯಾಪಕರು ಎರಡು ದಿನಗಳ ಶಿಶುವಾಟಿಕ ಆಚಾರ್ಯ ಸಮ್ಮೇಳನದಲ್ಲಿ ಭಾಗವಹಿಸಿದರು.

**2023–24ನೇ ಶೈಕ್ಷಣಿಕ ಪ್ರವಾಸಗಳು :**

**3ನೇ ತರಗತಿ : 8.11.2024**



3ನೇ ತರಗತಿಯವರ ಹೊರಸಂಚಾರವನ್ನು ಕೇರಳದ ವಿಸ್ಮಯಕ್ಕೆ ಏರ್ಪಡಿಸಲಾಗಿತ್ತು. 83 ವಿದ್ಯಾರ್ಥಿಗಳು, 7 ಅಧ್ಯಾಪಕರು, ಇಬ್ಬರು ಸಹಾಯಕಿಯರು ಭಾಗವಹಿಸಿದ್ದರು.

**4ನೇ ತರಗತಿ : 8.11.2024**



4ನೇ ತರಗತಿಯವರ ಹೊರಸಂಚಾರವನ್ನು ಥೋನ್ಸ್ ಪಾರ್ಕ್, ಉಡುಪಿ ದೇವಸ್ಥಾನ ಹಾಗೂ ಪಡುಬಿದ್ರೆ ಬೀಚ್‌ಗೆ ಏರ್ಪಡಿಸಲಾಗಿತ್ತು. 108 ವಿದ್ಯಾರ್ಥಿಗಳು, 7 ಅಧ್ಯಾಪಕರು, ಒಬ್ಬರು ಸಹಾಯಕಿಯರು ಹಾಗೂ ಒಬ್ಬರು ಪೋಷಕರು ಭಾಗವಹಿಸಿದ್ದರು.

**ಗೆಜ್ಜೆಗಿರಿ ಪ್ರವಾಸ : 16.11.2024**



3ನೇ ಮತ್ತು 4ನೇ ತರಗತಿಯ ವಿದ್ಯಾರ್ಥಿಗಳಿಗೆ ಗೆಜ್ಜೆಗಿರಿ ಹಾಗೂ ಹನುಮಗಿರಿ ಪ್ರವಾಸ ಹಮ್ಮಿಕೊಳ್ಳಲಾಯಿತು. ಒಟ್ಟು 71 ವಿದ್ಯಾರ್ಥಿಗಳು, 4 ಅಧ್ಯಾಪಕರು ಭಾಗವಹಿಸಿದರು.

**ಬೌದ್ಧಿಕ ಸ್ಪರ್ಧೆ : 27 ಮತ್ತು 28**

2024–25ನೇ ಶೈಕ್ಷಣಿಕ ವರ್ಷದ ಬೌದ್ಧಿಕ ಸ್ಪರ್ಧೆಗಳನ್ನು ಎರಡು ದಿನಗಳ ಕಾಲ ಆಯೋಜಿಸಲಾಗಿತ್ತು. ಸ್ಮರಣಾ ಶಕ್ತಿ, ಬೆಂಕಿ ಇಲ್ಲದ ಅಡುಗೆ, ಪ್ರಬಂಧ, ಚಿತ್ರಕಲೆ, ಎಲೆ ಗುರುತಿಸುವಿಕೆ, ಶಬ್ದ ಗ್ರಹಿಕೆ, ಮುಖವರ್ಣಿಕೆ, ಆಶು ಭಾಷಣ ಇತ್ಯಾದಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

**ಕನ್ನಡ ರಾಜ್ಯೋತ್ಸವ ದಿನಾಂಕ 01–11–2024**



ಬಂಟ್ವಾಳ ತಾಲೂಕಿನ ಮಿನಿ ಸೌಧದ ಮುಂಭಾಗದಲ್ಲಿ ಕನ್ನಡ ರಾಜ್ಯೋತ್ಸವದ ಪಥ ಸಂಚಲನಲ್ಲಿ ಪಾಲ್ಗೊಂಡ ಪ್ರೌಢಶಾಲೆಯ ಘೋಷ್ ತಂಡ.

**ಶ್ರೇಯಾಂಕ್‌ಗೆ ಕಂಚಿನ ಪದಕ 4.11.2024**



ಸಾರ್ವಜನಿಕ ಶಿಕ್ಷಣ ಇಲಾಖೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ದೈಹಿಕ ಶಿಕ್ಷಣ ಶಿಕ್ಷಕರ ಸಂಘ ಮಂಗಳೂರು ಏರ್ಪಡಿಸಿದ ದಕ್ಷಿಣ ಕನ್ನಡ ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ 8ನೇ ತರಗತಿಯ ಶ್ರೇಯಾಂಕ್ ಉದ್ದ ಜಿಗಿತದಲ್ಲಿ ಕಂಚಿನ ಪದಕಕ್ಕೆ ಪಾತ್ರನಾಗಿದ್ದಾನೆ.

**ಚಕ್ರ ಎಸೆತದಲ್ಲಿ ಕಂಚಿನ ಪದಕ**

ದಿನಾಂಕ 5.11.2024

ಸಾರ್ವಜನಿಕ ಶಿಕ್ಷಣ ಇಲಾಖೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ದೈಹಿಕ ಶಿಕ್ಷಣ ಶಿಕ್ಷಕರ ಸಂಘ ಮಂಗಳೂರು ಏರ್ಪಡಿಸಿದ ದಕ್ಷಿಣ ಕನ್ನಡ ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ 8ನೇ ತರಗತಿಯ ಸಂಕೀರ್ತ್ ಶೆಟ್ಟಿ ಚಕ್ರ ಎಸೆತದಲ್ಲಿ ಕಂಚಿನ ಪದಕವನ್ನು ಪಡೆದುಕೊಂಡಿದ್ದಾನೆ .

**ಜಿಲ್ಲಾ ಮಟ್ಟಕ್ಕೆ ಆಯ್ಕೆ** 6.11.2024



ಶಾಂತಿವನ ಟ್ರಸ್ಟ್ (ರಿ.)ಧರ್ಮಸ್ಥಳದ ವತಿಯಿಂದ' ಜ್ಞಾನ ವರ್ಷಿಣಿ' ಪುಸ್ತಕಕ್ಕೆ ಸಂಬಂಧಿಸಿ ಜರಗಿದ ತಾ.ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ 10ನೇ ತರಗತಿಯ ಅನನ್ಯ ಎಸ್ ಪ್ರಥಮ ಸ್ಥಾನವನ್ನು, ಶ್ಲೋಕ ಕಂಠ ಪಾಠ ಸ್ಪರ್ಧೆಯಲ್ಲಿ 10ನೇ ತರಗತಿಯ ಕೀರ್ತಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆ

**ಅತಿಥಿಗಳ ಭೇಟಿ 12.11.2024.**

ದೈನಂದಿನ ಪ್ರಾರ್ಥನೆ ಸರಸ್ವತಿ ವಂದನದಲ್ಲಿ ಶ್ರೀಮತಿ ಗೀತಾಲಕ್ಷ್ಮಿ (ವಿದೇಶದಲ್ಲಿ 25

ವರ್ಷಗಳ ಕಾಲ ಶಿಕ್ಷಕರಾಗಿ ನಿವೃತ್ತರಾದವರು ಹಾಗೂ ಕೃಷಿ ಮತ್ತು ಹೈನುಗಾರಿಕೆಯಲ್ಲಿ ತೊಡಗಿಕೊಂಡವರು) ಹಾಗೂ ನಿತಿನ್ ಪಕ್ಕಳ ಕೆಂಜಾರು ಉದ್ಯಮಿ ಹಾಗೂ ಶ್ರೀಯುತ ಜಗದೀಶ್ (ಮಂಗಳೂರು ಗ್ರಾಮಾಂತರ ಜಿಲ್ಲಾ ಸೇವಾ ಪ್ರಮುಖರು ಮತ್ತು ಶ್ರೀರಾಮ ಪ್ರೌಢಶಾಲೆಯ ಶಿಕ್ಷಕರಾದ ಜಿನ್ನಪ್ಪ ಶ್ರೀಮಾನ್ ಉಪಸ್ಥಿತರಿದ್ದರು.

**ಅತಿಥಿಗಳ ಭೇಟಿ 9.11.2024**



ದೈನಂದಿನ ಪ್ರಾರ್ಥನೆ ಸರಸ್ವತಿ ವಂದನದಲ್ಲಿ ಶ್ರೀ ದೇವಿಪ್ರಸನ್ನ ಗೋಯಲ್. (ಗುರುವಾಂಗ್‌ನ winntos home work pvt. Ltd,ನ ಉದ್ಯಮಿಗಳು.) ಹಾಗೂ ಶ್ರೀ ದಿಲೇಶ್ ಶೆಟ್ಟಿ ಉಡುಪಿಯಲ್ಲಿ ಉದ್ಯಮಿ ಹಾಗೂ ಶ್ರೀ ಬಾಲಕೃಷ್ಣ ಭಂಡಾರಿ ಮುಂಬೈಯ ಉದ್ಯಮಿ ಹಾಗೂ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಹಾಗೂ ವಿದ್ಯಾಕೇಂದ್ರದ ಸಂಸ್ಥಾಪಕರಾಗಿರುವ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಹಾಗೂ ಮುಖ್ಯೋಪಾಧ್ಯಾಯರದ ಶ್ರೀ ಗೋಪಾಲ್ ಎಂ ಉಪಸ್ಥಿತರಿದ್ದರು

**ತಾಲೂಕು ಮಟ್ಟದ ಪ್ರತಿಭಾ ಕಾರಂಜಿ 9.11.2024**

ಬ.ತಾ.ಮಟ್ಟದ ಪ್ರತಿಭಾ ಕಾರಂಜಿ 2024–25ನೇ ಸಾಲಿನ ಪ್ರಬಂಧ ರಚನೆ ಸ್ಪರ್ಧೆಯಲ್ಲಿ ಶ್ರೀರಾಮ ಪ್ರೌಢಶಾಲೆಯ 10ನೇ ತರಗತಿಯ ಅನನ್ಯ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾಳೆ.

**ಭಜನಾ ಕಾರ್ಯಕ್ರಮದಲ್ಲಿ ಭಾಗಿ 11.11.2024**



ಶ್ರೀ ನಿಟಿಲಾಕ್ಷ ಸದಾಶಿವ ದೇವಸ್ಥಾನ, ನೆಟ್ಲ, ಇಲ್ಲಿ ಜರಗಿದ ಕಾರ್ತಿಕ ದೀಪೋತ್ಸವದ ಭಜನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಶ್ರೀರಾಮ ಪ್ರೌಢಶಾಲೆ ವಿದ್ಯಾರ್ಥಿಗಳು

**ಕನಸುಗಳು " ರಾಜ್ಯಮಟ್ಟದ ಸ್ಪರ್ಧೆ 15.11.2024**

ವಿವೇಕಾನಂದ ಪದವಿಪೂರ್ವ ಕಾಲೇಜು ಪುತ್ತೂರು ಇಲ್ಲಿ ಜರಗಿದ "ಕನಸುಗಳು" ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ ಪ್ರೌಢಶಾಲೆಯ ವಿದ್ಯಾರ್ಥಿಗಳ ತಂಡ.

**ಫೈಯರ್ ಸೇಫ್ಟಿ &ಹೆಲ್ತ್ ಸೇಫ್ಟಿ ತರಬೇತಿ18.11.24**



ಮಧುಕರ ಸಭಾಂಗಣದಲ್ಲಿ ಸೇಫ್ಟಿ ಫಸ್ಟ್ ಅಭಿಯಾನ ಮೂಲಕ ಫೈಯರ್ ಸೇಫ್ಟಿ ಮತ್ತು ಹೆಲ್ತ್ ಸೇಫ್ಟಿ ಅವರ್ನೆಸ್ ಗಾಗಿ ವಿದ್ಯಾರ್ಥಿಗಳಿಗೆ ಅಗ್ನಿ ಸುರಕ್ಷತೆ ಹಾಗೂ ವಿವಿಧ ಅವಘಡಗಳ ಸಂದರ್ಭದಲ್ಲಿ ಪ್ರಥಮ ಚಿಕಿತ್ಸೆಯ ಬಗ್ಗೆ ಮಾಹಿತಿಯನ್ನು ಮಂಗಳೂರಿನ ಪ್ರೊಫೆಷನಲ್ ಫೈರ್ ಅಂಡ್ ಸೇಫ್ಟಿ ಆಫೀಸರ್ ಆಗಿರುವ ಶ್ರೀ ಸತ್ಯರಾಜ್ ನೀಡಿದರು.

**ಗುಂಪಾಟ 19–11–2024**



ಬೆಳಗ್ಗೆಯಿಂದ ಸಂಜೆವರೆಗೆ ನಡೆದ 17 ಮತ್ತು 14ರ ವಯೋಮಾನದ ಬಾಲಕ ಮತ್ತು ಬಾಲಕಿಯರ ವಿಭಾಗದ ಗುಂಪಾಟಗಳಾದ ತ್ರೋಬಾಲ್, ವಾಲಿಬಾಲ್, ಕಬಡ್ಡಿ, ಲಗೋರಿ, ಖೋ– ಖೋ ಮತ್ತು ಹಗ್ಗ ಜಗ್ಗಾಟ ಸ್ಪರ್ಧೆಯನ್ನು ನಡೆಸುವಲ್ಲಿ ಮುಖ್ಯೋಪಾಧ್ಯಾಯರು ಎಲ್ಲಾ ಅಧ್ಯಾಪಕರು ಸಹಕರಿಸಿದರು. ಶಾರೀರಿಕ ಅಧ್ಯಾಪಕರಾದ ಪುರುಷೋತ್ತಮ ಶ್ರೀಮಾನ್ ಮತ್ತು ರಮ್ಯ ಶ್ರೀ ಮಾತಾಜಿ ಕ್ರೀಡಾಕೂಟದ ಸಂಯೋಜನೆ ಮಾಡಿದರು.

**ವಾರ್ಷಿಕ ಕ್ರೀಡಾಕೂಟ 21–11–2024**



2024–25ನೇ ಸಾಲಿನ ವಾರ್ಷಿಕ ಕ್ರೀಡಾಕೂಟವನ್ನು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಇವರು ಕ್ರೀಡಾಪಟುಗಳಿಂದ ಕ್ರೀಡಾ ಜ್ಯೋತಿಯನ್ನು ಸ್ವೀಕರಿಸಿ ದೀಪ ಬೆಳಗಿಸಿ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಶುಭ ಹಾರೈಸಿದರು. ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕ್ರೀಡಾಪಟುಗಳು ಕ್ರೀಡಾ ಜ್ಯೋತಿಯನ್ನು ಹಿರಿಯರಿಗೆ ನೀಡಿದರು. ವೇದಿಕೆಯಲ್ಲಿ ಸಂಸ್ಥೆಯ ಸಹಸಂಚಾಲಕರಾದ ಶ್ರೀ ರಮೇಶ್ ಯನ್, ಪದವಿ ವಿಭಾಗದ ಪ್ರಾಂಶುಪಾಲರು ಹಾಗೂ ವಿದ್ಯಾಕೇಂದ್ರದ ಆಡಳಿತ ನಿರ್ವಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್ ಹಾಗೂ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು. ಕ್ರೀಡಾಪಟುಗಳು ಕ್ರೀಡಾ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಪ್ರತಿಜ್ಞೆಯನ್ನು ಆದಿತ್ಯ ವಾಚಿಸಿದರು. ಸಂಚಾಲಕರಾದ ಶ್ರೀ ವಸಂತ ಮಾಧವ, ಮುಖ್ಯಗುರುಗಳು ಶ್ರೀ ಗೋಪಾಲ ಎಂ, ಅಧ್ಯಾಪಕರು ಕ್ರೀಡಾಕೂಟದ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಿದರು.

**NMMS ಕಾರ್ಯಾಗಾರ 29/11/2024**



ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಬಂಟ್ವಾಳ, ಕ್ಷೇತ್ರ ಸಂಪನ್ಮೂಲ ಕೇಂದ್ರ ಬಂಟ್ವಾಳ ಹಾಗೂ ಆಕಾಂಕ್ಷ ಚಾರಿಟೇಬಲ್ ಟ್ರಸ್ಟ್–ಪುತ್ತೂರು ಇವರ ಸಹಯೋಗದೊಂದಿಗೆ NMMS ಪರೀಕ್ಷಾ ಅಭ್ಯರ್ಥಿಗಳಿಗೆ ಒಂದು ದಿನದ ಕಾರ್ಯಾಗಾರ ನಡೆಯಿತು. ಈ ಕಾರ್ಯಾಗಾರದಲ್ಲಿ ಯಶಸ್ವಿನಿ ಮಾತಾಜಿ ಹಾಗೂ ಎಂಟನೇ ತರಗತಿಯ 4 ವಿದ್ಯಾರ್ಥಿಗಳು ಭಾಗವಹಿಸಿದರು.

## ಸೆಕೆಂಡರಿ ಸ್ಕೂಲ್

**ಸ್ಮಾರ್ಟ್‌ಬೋರ್ಡ್ ಡೆಮೋ ತರಗತಿ 04.11.24**

ಸೆಕೆಂಡರಿ ಸ್ಕೂಲ್‌ನಲ್ಲಿ ಸ್ಮಾರ್ಟ್ ಬೋರ್ಡ್ ಡೆಮೊ ತರಗತಿಯನ್ನು ನಿವೃತ್ತ ಪ್ರೊಫೆಸರ್ ಹಾಗೂ ರೋಟರಿ ಕ್ಲಬ್‌ನ ತರಬೇತುದಾರರಾಗಿರುವ ಕಿಶನ್ ಕುಮಾರ್ ಮತ್ತು ಉಪನ್ಯಾಸಕರು ಹಾಗೂ ಸಿಇಟಿ ತರಬೇತುದಾರರಾಗಿರುವ ಸುಧಾಕರ್ ಇವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ವಿದ್ಯಾ–ಕೇಂದ್ರದ ಎಲ್ಲಾ ಪ್ರಮುಖರು ಉಪಸ್ಥಿತರಿದ್ದರು

**ತಾ.ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಭಾಗಿ: 9.11.24**

ಸತ್ಯ ಸಾಯಿ ವಿದ್ಯಾಕೇಂದ್ರ ಅಳಿಕೆಯಲ್ಲಿ ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

**ಸಾಂಸ್ಕೃತಿಕ ಕಾರ್ಯಕ್ರಮ ದಿನಾಂಕ 22.11.24 :**

ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಸ್ಥೆಯ ಸಂಚಾಲಕರಾದ ಶ್ರೀ ವಸಂತ ಮಾಧವ ಇವರು ಮಾಡಿದರು. ಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಉಪಸ್ಥಿತರಿದ್ದರು. ಕ್ರೀಡೆಗಳಲ್ಲಿ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

**ಅಧ್ಯಾಪಕರ ಬೈಠಕ್ 09.11.24:**

10ನೇ ತರಗತಿಯ ವಿದ್ಯಾರ್ಥಿಗಳ ಸಂಕಲನಾತ್ಮಕ ಮೌಲ್ಯಮಾಪನದ ಅಂಕಗಳ ಬಗ್ಗೆ ಸಂಚಾಲಕರಾದ ಶ್ರೀ ವಸಂತ ಮಾಧವರವರ ಜೊತೆ ಅಧ್ಯಾಪಕರ ಬೈಠಕ್‌ನ್ನು ನಡೆಸಲಾಯಿತು.

**ವಾರ್ಷಿಕ ಕ್ರೀಡಾಕೂಟ ದಿನಾಂಕ: 23.11.2024**

2024–25ನೇ ಸಾಲಿನ ವಾರ್ಷಿಕ ಕ್ರೀಡಾಕೂಟವನ್ನು ಮೂಡಬಿದ್ರೆಯ ಜೈನ್ ಶಿಕ್ಷಣ ಸಂಸ್ಥೆಯ ನಿವೃತ ಶಿಕ್ಷಕರು, ಕೃಷಿಕರು, ಅಮ್ಮೂರು ನಿವಾಸಿ, ಶ್ರೀ ಮೋಹನ್ ರಾಜ್ ಚೌಟ ಇವರು ಕ್ರೀಡಾಪಟುಗಳಿಂದ ಕ್ರೀಡಾ ಜ್ಯೋತಿಯನ್ನು ಸ್ವೀಕರಿಸಿ ದೀಪ ಬೆಳಗಿಸಿ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಶುಭ ಹಾರೈಸಿದರು. ವೇದಿಕೆಯಲ್ಲಿ ಶ್ರೀ ಸತೀಶ್ ಭಟ್ ಶಿವಗಿರಿ, ಶ್ರೀ ವಸಂತ್ ಬಲ್ಲಾಳ್ ಹಾಗೂ ಶ್ರೀ ತಿರುಮಲೇಶ್ವರ ಪ್ರಶಾಂತ್ ಉಪಸ್ಥಿತರಿದ್ದರು.

## ಪದವಿಪೂರ್ವ

**ಪ್ರೇರಣಾ ಸಂಘ ಪರಿಚಯ ವರ್ಗ:**

ದಿನಾಂಕ 01.11.24ರಂದು ವೇದವ್ಯಾಸ ಧ್ಯಾನ ಮಂದಿರದಲ್ಲಿ ನಡೆದ ಪ್ರೇರಣ ಸಂಘ ಪರಿಚಯ ವರ್ಗದಲ್ಲಿ 21 ಮಂದಿ ಉಪನ್ಯಾಸಕರು ಭಾಗವಹಿಸಿದರು.

**ಜಿಲ್ಲಾ ಮಟ್ಟದ ಕರಾಟೆ ಸ್ಪರ್ಧೆ –ಪ್ರಥಮ ಸ್ಥಾನ**




ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಸಂಘ ಮಂಗಳೂರು ಇದರ ಜಂಟಿ ಆಶ್ರಯದಲ್ಲಿ 06.11.24 ರಂದು ಆಳ್ವಾಸ್ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಜಿಲ್ಲಾ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಶ್ರವಣ್ ಪ್ರಥಮ ಸ್ಥಾನ ಪಡೆದು ನವೆಂಬರ್ 13ಹಾಗೂ 14 ರಂದು ದಾವಣಗೆರೆಯಲ್ಲಿ ನಡೆಯುವ ರಾಜ್ಯ ಮಟ್ಟದ ಕರಾಟೆ ಸ್ಪರ್ಧೆಗೆ ಆಯ್ಕೆಯಾಗಿರುತ್ತಾರೆ.

**ಇಂಜಿನಿಯರಿಂಗ್ ಕಾಲೇಜ್ ಭೇಟಿ** 8.11.24

ದ್ವಿತೀಯ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜ್ ಪುತ್ತೂರು ಇಲ್ಲಿಗೆ ಭೇಟಿ ನೀಡಿ ಇಂಜಿನಿಯರಿಂಗ್ ಕೋರ್ಸ್ ಗಳ ಬಗ್ಗೆ ಮಾಹಿತಿಯನ್ನು ಪಡೆದರು.

**ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕಾರ್ಯಕ್ರಮ:** 8.11.2024

ಪ್ರಾಥಮಿಕ ಶಾಲೆಯ ವೇದವ್ಯಾಸ ಮಂದಿರದಲ್ಲಿ ರಂದು ನಡೆದ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕರ್ನಾಟಕ(ನೊಂ)ವತಿಯಿಂದ ನಡೆದ ಕನ್ನಡ ಶಾಲೆಗಳ ಸಮ್ಮಾನ ಕಾರ್ಯಕ್ರಮದಲ್ಲಿ ಪದವಿಪೂರ್ವ ವಿಭಾಗದ ವಿದ್ಯಾರ್ಥಿಗಳು ಸಮೂಹ ಗೀತೆ ಮತ್ತು ನೃತ್ಯ ರೂಪಕವನ್ನು ನಡೆಸಿಕೊಟ್ಟರು.

**ವಿದ್ಯಾಭಾರತಿ ರಾಷ್ಟ್ರೀಯ ಜ್ಞಾನ ವಿಜ್ಞಾನ ಮೇಳ**

ದಿನಾಂಕ 10.11.2024 ರಿಂದ 16.11.2024 ರವರೆಗೆ ರಾಜ್ಯಸ್ಥಾನದ ಜೈಪುರದಲ್ಲಿ ನಡೆದ ವಿದ್ಯಾಭಾರತಿ ರಾಷ್ಟ್ರಮಟ್ಟದ ಜ್ಞಾನ ವಿಜ್ಞಾನ ಮೇಳದಲ್ಲಿ ವಿಜ್ಞಾನ ಪತ್ರವಾಚನ ಸ್ಪರ್ಧೆಯಲ್ಲಿ ದ್ವಿತೀಯ ಕಲಾ ವಿಭಾಗದ ಅಂಕಿತ್ ಗುಪ್ತ ಭಾಗವಹಿಸಿರುತ್ತಾರೆ.

**ರಾಷ್ಟ್ರೀಯ ವಿಚಾರ ಗೋಷ್ಠಿ: 14/11/2024**

ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ "Present status of language education and future possibilities" ಎಂಬ ವಿಷಯದ ಕುರಿತು ನಡೆದ ಒಂದು ದಿನದ ರಾಷ್ಟ್ರೀಯ ವಿಚಾರ ಗೋಷ್ಠಿಯಲ್ಲಿ ಹಿಂದಿ ಉಪನ್ಯಾಸಕರಾದ ಶ್ರೀಮತಿ ಶೋಭಾ.ವಿ.ಶೆಟ್ಟಿ, ಕನ್ನಡ ಉಪನ್ಯಾಸಕರಾದ ಶ್ರೀ ಗೋವಿಂದ ನಾರಾಯಣ, ಸಂಸ್ಕೃತ ಉಪನ್ಯಾಸಕರಾದ ಶ್ರೀ ಮಹೇಂದ್ರ ಮಂಜುನಾಥ್ ಭಟ್ ಭಾಗವಹಿಸಿರುತ್ತಾರೆ.

**ವಿದ್ಯಾಭಾರತಿ ರಾಷ್ಟ್ರೀಯ ಮಟ್ಟದ ಸಂಸ್ಕೃತಿ ಮಹೋತ್ಸವ**

ದಿನಾಂಕ 15.11.2024 ರಿಂದ 18.11.2024ರವರೆಗೆ ಉಜ್ಜಯಿನಿಯಲ್ಲಿ ನಡೆದ ವಿದ್ಯಾಭಾರತಿ ರಾಷ್ಟ್ರ ಮಟ್ಟದ ಸಂಸ್ಕೃತಿ ಮಹೋತ್ಸವದ ಸಂಸ್ಕೃತಿ ಜ್ಞಾನ ರಸಪ್ರಶ್ನೆಸ್ಪರ್ಧೆಯಲ್ಲಿ ಶ್ರೀನಿವಾಸ, ಗಗನ್, ತುಷಾರ್ ಭಾಗವಹಿಸಿರುತ್ತಾರೆ.

**ವಿದ್ಯಾಭಾರತಿ ರಾಷ್ಟ್ರೀಯ ಮಟ್ಟದ ಗಣಿತ ಮೇಳ:**

18.11.2024ರಿಂದ 22.11.2024ರವರೆಗೆ ಒಡಿಸ್ಸಾದ ಆನಗುಲದಲ್ಲಿ ನಡೆದ ವಿದ್ಯಾಭಾರತಿ ರಾಷ್ಟ್ರೀಯ ಮಟ್ಟದ ಗಣಿತ ಮೇಳದ ವೇದಗಣಿತ ಸ್ಪರ್ಧೆಯಲ್ಲಿ ಚಿನ್ಮಯಿ, ಆಶಿಕಾ, ಚೈತ್ರ ಭಾಗವಹಿಸಿರುತ್ತಾರೆ.

**ಅಂತರ್ ಜಿಲ್ಲಾಮಟ್ಟದ ಸಾಂಸ್ಕೃತಿಕ ಸ್ಪರ್ಧೆ 19.11.24**

ವಿವೇಕಾನಂದ ಮಹಾವಿದ್ಯಾಲಯ (ಸ್ವಾಯತ್ತ) ಪುತ್ತೂರು ಕಾಲೇಜಿನ ಸ್ನಾತಕ ವಿಭಾಗದ ಹಾಗೂ ಸ್ನಾತಕೋತರ ವಿಭಾಗದ ದಶಮಾನೋತ್ಸವ ಸವಿ ನೆನಪಿಗಾಗಿ ನಡೆಯುವ ವಿವೇಕಾನಂದ ಜಯಂತಿ 2025 ಅಂತರ್ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳ ಪ್ರತಿಭೋತ್ಸವದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದು ಪ್ರೀತಿ ದ್ವಿತೀಯ ವಿಜ್ಞಾನ ಇವರು ಕನ್ನಡ ಕವನ ರಚನೆಯಲ್ಲಿ ಪ್ರಥಮ ಸ್ಥಾನವನ್ನು, ಆತ್ಮಿ ದ್ವಿತೀಯ ವಿಜ್ಞಾನ ವಿಭಾಗ ಇವರು ಸಂಸ್ಕೃತ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು, ನಿಖಿಲ್ ಬಿ ಎಸ್ ದ್ವಿತೀಯ ವಾಣಿಜ್ಯ ವಿಭಾಗ ಇವರು ಜನಪದ ಗೀತೆಯಲ್ಲಿ ಪ್ರಥಮ ಸ್ಥಾನವನ್ನು, ದುರ್ಗಾಶರಣ್ ಪ್ರಥಮ ವಿಜ್ಞಾನ ವಿಭಾಗ ಭಾವಗೀತೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ.

**ವಾರ್ಷಿಕ ಕ್ರೀಡಾಕೂಟ 23.11.2024**



2024–25ನೇ ಸಾಲಿನ ವಾರ್ಷಿಕ ಕ್ರೀಡಾಕೂಟವನ್ನು ಮೂಡಬಿದ್ರೆಯ ಜೈನ್ ಶಿಕ್ಷಣ ಸಂಸ್ಥೆಯ ನಿವೃತ ಶಿಕ್ಷಕರು, ಕೃಷಿಕರು, ಅಮ್ಮೂರು ನಿವಾಸಿ, ಶ್ರೀ ಮೋಹನ್ ರಾಜ್ ಚೌಟ ಇವರು ಕ್ರೀಡಾಪಟುಗಳಿಂದ ಕ್ರೀಡಾ ಜ್ಯೋತಿಯನ್ನು ಸ್ವೀಕರಿಸಿ ದೀಪ ಬೆಳಗಿಸಿ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಶುಭ ಹಾರೈಸಿದರು. ವೇದಿಕೆಯಲ್ಲಿ ಶ್ರೀ ಸತೀಶ್ ಭಟ್ ಶಿವಗಿರಿ , ಶ್ರೀ ವಸಂತ್ ಬಲ್ಲಾಳ್ ಹಾಗೂ ಶ್ರೀ ತಿರುಮಲೇಶ್ವರ ಪ್ರಶಾಂತ್ ಉಪಸ್ಥಿತರಿದ್ದರು.

**ಕಬಡ್ಡಿ ರಾಷ್ಟ್ರ ಮಟ್ಟಕ್ಕೆ ಆಯ್ಕೆ:**



23.11.2024 ರಿಂದ 25.11.2024 ರವರೆಗೆ ಬೆಳಗಾವಿಯಲ್ಲಿ ನಡೆದ ರಾಜ್ಯ ಮಟ್ಟದ ಪದವಿ ಪೂರ್ವ ಕಾಲೇಜುಗಳ ಬಾಲಕರ ಕಬಡ್ಡಿ ಪಂದ್ಯಾಟದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರತಿನಿಧಿಸಿ ರಾಜ್ಯಮಟ್ಟದಲ್ಲಿ ಲಕ್ಷೀಶ ಇವರು ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

## ಪದವಿ

**ಫುಟ್ಬಾಲ್ ಪಂದ್ಯಾಟ : 05–11–2024**



ಮಂಗಳೂರು ಕೊಣಾಜೆ ಯೂನಿವರ್ಸಿಟಿ ಕಾಲೇಜಿನಲ್ಲಿ ನಡೆದ ಫುಟ್ಬಾಲ್ ಪಂದ್ಯಾಟದಲಿ ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯ ಕಲ್ಲಡ್ಕದ ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

**ಇತಿಹಾಸ ಉಪನ್ಯಾಸಕರಿಗೆ SEP ಪಠ್ಯಕ್ರಮದ ಕುರಿತು ಒಂದು ದಿನದ ಕಾರ್ಯಾಗಾರ 6.11.24**

ಸೈಂಟ್ ಮೇರಿಸ್ ಸಿರಿಯನ್ ಕಾಲೇಜು ಬ್ರಹ್ಮಾವರ, ಉಡುಪಿಯಲ್ಲಿ ನಡೆದ ಕಾರ್ಯಾಗಾರದಲ್ಲಿ ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಶ್ರೀಮತಿ ಆಶಾಲತಾ ಮಾತಾಜಿ ಭಾಗವಹಿಸಿರುತ್ತಾರೆ.

### "ತುಡರ್" ದೀಪಾವಳಿ ಸಂಭ್ರಮ 05.112024




ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ಆಯೋಜಿಸಲಾದ "ತುಡರ್" ದೀಪಾವಳಿ ಸಂಭ್ರಮ ಕಾರ್ಯಕ್ರಮವು ಅಂತಿಮ ಪದವಿ ವಿದ್ಯಾರ್ಥಿಗಳಿಂದ ತಾ. ರಂದು ಸಂಜೆ ನಡೆಯಿತು. ಶ್ರೀರಾಮ ಪದವಿ ಕಾಲೇಜಿನಲ್ಲಿ ಇದೇ ಮೊದಲ ಬಾರಿಗೆ ಭಾರತದ ವಿಶಿಷ್ಟ, ಮಹತ್ವಪೂರ್ಣ ಹಬ್ಬ ದೀಪಾವಳಿಯನ್ನು ಬಹಳ ಸಂಭ್ರಮದಿಂದ ಆಚರಿಸಲಾಯಿತು. ಬೆಳಕಿನ ಹಬ್ಬವಾದ ದೀಪಾವಳಿಯ ವಿಶೇಷತೆಗಳನ್ನು ವಿದ್ಯಾರ್ಥಿಗಳು ವಿವಿಧ ಆಕರ್ಷಕ ನೃತ್ಯ ಹಾಗೂ ಪ್ರಹಸನಗಳ ಮೂಲಕ ಪ್ರಸುತಪಡಿಸಿದರು. ವಿವಿಧ ಸಿಡಿಮದ್ದುಗಳ ಪ್ರದರ್ಶನವು ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿತು. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರದ ಸಂಸ್ಥಾಪಕರೂ, ಮಾರ್ಗದರ್ಶಕರೂ ಆದ ಡಾ. ಪ್ರಭಾಕರ ಭಟ್ ಕಲ್ಲಡ್ಕ ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ವಿದ್ಯಾರ್ಥಿಗಳ ಪ್ರದರ್ಶನಗಳನ್ನು ವೀಕ್ಷಿಸಿ ಶುಭಹಾರೈಸಿದರು. ಪ್ರಾಂಶುಪಾಲ ಕೃಷ್ಣ ಪ್ರಸಾದ್ ಕಾಯರ್ ಕಟ್ಟೆ ಹಾಗೂ ಪ್ರದೀಪ್ತ ಸಾಂಸ್ಕೃತಿಕ ಸಂಘದ ನಿರ್ದೇಶಕಿ ಶ್ರೀಮತಿ ವಿನುತಾ ಲಕ್ಷ್ಮಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

### ಅಂತರ್ ಕಾಲೇಜು ಮಟ್ಟದ "ಉತ್ಕರ್ಷ" ಫೆಸ್ಟ್– ಶೈಕ್ಷಣಿಕ ಸ್ಪರ್ಧಾ ಕಾರ್ಯಕ್ರಮ 08/11/2024

ಕಾರ್‍ಯಕ್ರಮದ ಅಧ್ಯಕ್ಷರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ದೇಶವನ್ನು ಶ್ರೇಷ್ಠ ಮಟ್ಟಕ್ಕೇರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಕೇವಲ ಅಂಕ– ಶ್ರೇಯಾಂಕಗಳು ಮಾತ್ರವಲ್ಲದೆ, ಮನುಷ್ಯನಾಗಿ ಬಾಳಲು ಬೇಕಿರುವ ಸಂಸ್ಕಾರಯುತ ಶಿಕ್ಷಣ ಕೊಡುವ ಪ್ರಯತ್ನ ಇಲ್ಲಿ ನಡೆಯುತ್ತಿರುವುದು ಎಂಬುದಾಗಿ ಹೇಳಿದರು. ಪ್ರಗತಿಪರ ಕೃಷಿಕರಾದ ಶಿವಪ್ಪ ಪೂಜಾರಿ, ನಿವೃತ್ತ ಪೋಲಿಸ್ ಅಧಿಕಾರಿ ಶ್ರೀ ರಾಮಪ್ರಸಾದ್, ಆಡಳಿತ ಮಂಡಳಿ ಸದಸ್ಯ ಶ್ರೀ ಧೀರಜ್ ಬಲ್ಲೆಕೋಡಿ ಹಾಗೂ ಶ್ರೀ ಸುಜಿತ್ ಕೊಟ್ಟಾರಿ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲ ಹಾಗೂ ವಿದ್ಯಾಕೇಂದ್ರದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್ ಕಾಯರ್ ಕಟ್ಟೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪಪ್ರಾಂಶುಪಾಲ ಯತಿ–ರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

### ಉತ್ಕರ್ಷ 2024 ಸಮಾರೋಪ ಕಾರ್ಯಕ್ರಮ

ಪ.ಪೂ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದ್ದ ಶೈಕ್ಷಣಿಕ ಸ್ಪರ್ಧೆಗಳಲ್ಲಿ ಬಂಟ್ವಾಳ– ಪುತ್ತೂರು ತಾಲೂಕುಗಳ 9 ಪದವಿಪೂರ್ವ ಕಾಲೇಜುಗಳ 350 ವಿದ್ಯಾರ್ಥಿಗಳು ಜನಪದ ನೃತ್ಯ, ಬಲೆ ತೆಲಿಪಾಲೆ, ರಸಪ್ರಶ್ನೆ, ಕಸದಿಂದ ರಸ, ಮೆಹಂದಿ ಇತ್ಯಾದಿ ಒಳಾಂಗಣ ಸ್ಪರ್ಧೆಗಳು ಹಾಗೂ ವಾಲಿಬಾಲ್, ಹಗ್ಗ ಜಗ್ಗಾಟ ಮುಂತಾದ ಹೊರಾಂಗಣ ಸ್ಪರ್ಧೆಗಳು ಸೇರಿದಂತೆ ಒಟ್ಟು 14 ಸ್ಪರ್ಧೆಗಳಲ್ಲಿ ಭಾಗವಹಿಸಿದರು. ಗಣಕ ವಿಜ್ಞಾನ ವಿಭಾಗದಲ್ಲಿ ಪ್ರತಿಯೊಬ್ಬರಿಗೂ ತಂತ್ರಜ್ಞಾನದ ಮೂಲಕ ಸ್ಪರ್ಧೆ ಹಾಗೂ ವ್ಯವಸ್ಥೆಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುವ ವ್ಯವಸ್ಥೆ ಮಾಡಲಾಗಿತ್ತು. ಮಧ್ಯಾಹ್ನ ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಉಪಪ್ರಾಂಶುಪಾಲ ಶ್ರೀ ಯತಿರಾಜ್ ಪೆರಾಜೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಚಾಲಕರು ಶ್ರೀ ವಸಂತ ಮಾಧವ ಇವರು ಅಧ್ಯಕ್ಷತೆ ವಹಿಸಿದ್ದರು. ದಕ್ಷಿಣ ಕನ್ನಡ ಮಹಿಳಾಮೋರ್ಛಾ ಭಾಜಪಾ ಅಧ್ಯಕ್ಷೆ ಡಾ. ಮಂಜುಳಾ ರಾವ್, ಹಿರಿಯ ವಿದ್ಯಾರ್ಥಿನಿ ಕು. ಮಾನಸಾ ರಾವ್ ಉಪಸ್ಥಿತರಿದ್ದರು. ಸ್ಪರ್ಧೆಗಳಲ್ಲಿ ವಿಜೇತರಿಗೆ ಅತಿಥಿಗಳು ಬಹುಮಾನಗಳನ್ನು ವಿತರಿಸಿದರು. ಶ್ರೀರಾಮಚಂದ್ರ ಪದವಿಪೂರ್ವ ವಿದ್ಯಾಲಯ ಪೆರ್ನೆ ಸಮಗ್ರ ಪ್ರಶಸ್ತಿಯನ್ನು ಪಡೆದುಕೊಂಡಿತು. ಸ್ಪರ್ಧಾಳುಗಳಿಗೆ ಅನಿಸಿಕೆ ವ್ಯಕ್ತಪಡಿಸುವ ಅವಕಾಶ ನೀಡಲಾಗಿತ್ತು. ಆಡಳಿತ ಮಂಡಳಿ ಸದಸ್ಯರಾದ ಲಕ್ಷ್ಮೀ ರಘುರಾಜ್ ಮಂಗಳೂರು ಹಾಗೂ ಅಕ್ಷತಾ ಕಾವೂರು, ಉಪಪ್ರಾಂಶುಪಾಲರಾದ ಶ್ರೀಮತಿ ಸುಕನ್ಯಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

### ಗ್ರಂಥಾಲಯ ಭೇಟಿ :13–11–2024



ಶ್ರೀರಾಮ ಪ್ರಾಥಮಿಕ ಶಾಲೆಯ 5ನೇ ತರಗತಿಯ ಪಠ್ಯಪುಸ್ತಕದಲ್ಲಿ 'ಗ್ರಂಥಾಲಯ' ಎಂಬ ವಿಷಯ ಇರುವ ಕಾರಣ 5ನೇ ತರಗತಿಯ ವಿದ್ಯಾರ್ಥಿಗಳು ಗ್ರಂಥಾಲಯಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.

### ಅಂತರ್ ಕಾಲೇಜು ಕಬ್ಬಡ್ಡಿ ಪಂದ್ಯಾವಳಿ: 8.11.24

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ಅಂತರ್ ಕಾಲೇಜು ಕಬ್ಬಡ್ಡಿ ಪಂದ್ಯಾವಳಿಯಲ್ಲಿ ಮಹಿಳೆಯರ ತಂಡ 3 ಸುತ್ತುಗಳನ್ನು ಗೆದ್ದು ಉತ್ತಮವಾಗಿ ಆಡಿರುತ್ತಾರೆ. ಈ ತಂಡದ ವ್ಯವಸ್ಥಾಪಕರಾಗಿ ಮತ್ತು ತರಬೇತುದಾರರಾಗಿ ದೈಹಿಕ ಶಿಕ್ಷಕರಾದ ಶ್ರೀ ಪ್ರಶಾಂತ್ ಸೋಮಯಾಜಿ ಶ್ರೀಮಾನ್ ಮತ್ತು ಹರ್ಷಿತ ಮಾತಾಜಿ ನಿರ್ವಹಿಸಿರುತ್ತಾರೆ.

### ರಾಷ್ಟ್ರೀಯ ವಿಚಾರ ಗೋಷ್ಠಿ: 14/11/2024




ರಂದು ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ "Present status of language education and future possibilities" ಎಂಬ ವಿಷಯದ ಕುರಿತು ನಡೆದ ಒಂದು ದಿನದ ರಾಷ್ಟ್ರೀಯ ವಿಚಾರ ಗೋಷ್ಠಿಯಲ್ಲಿ ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ಅಂತಿಮ ಬಿಎ ವಿದ್ಯಾರ್ಥಿನಿ ಕು. ಪದ್ಮಶ್ರೀ ಇವರು "ಭಾರತದಲ್ಲಿ ಸಂಸ್ಕೃತದ ಸ್ಥಾನಮಾನ" ಎಂಬ ವಿಷಯದ ಕುರಿತು ಮಂಡಿಸಿದರು. ಆಂಗ್ಲಭಾಷಾ ಉಪನ್ಯಾಸಕಿ ಶ್ರೀಮತಿ ಶ್ರೀದೇವಿ, ಬಿಸಿಎ ವಿದ್ಯಾರ್ಥಿನಿ ಕು. ದಿವ್ಯಲಕ್ಷ್ಮಿ, ಬಿಕಾಂ ವಿದ್ಯಾರ್ಥಿಗಳಾದ ಲವನೀಶ್, ಯಜ್ಞೇಶ್, ಗುರುಪ್ರಸಾದ್ ಇವರು ಭಾಗವಹಿಸಿರುತ್ತಾರೆ.

### ರಾಷ್ಟ್ರೀಯ ವಿಚಾರ ಸಂಕಿರಣ 15.11.2024

ವಿವೇಕಾನಂದ ಕಾಲೇಜು ಪುತ್ತೂರು ಇಲ್ಲಿ present status of social Science education and future possibility ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವು ನಡೆದಿದ್ದು ಉಪನ್ಯಾಸಕರಾದ ಶ್ರೀಮತಿ ಸಂಧ್ಯಾ ಮಾತಾಜಿ ಮತ್ತು ಶ್ರೀಮತಿ ಆಶಾಲತಾ ಮಾತಾಜಿ ಮತ್ತು ಬಿ. ಎ ವಿಭಾಗದ ವಿದ್ಯಾರ್ಥಿಗಳಾದ ಕವನ್, ಲಕ್ಷಿತ, ಮಾಶ್ವಲ್, ಬಿಂದು, ಚೈತ್ರ, ಗೀತೇಶ್, ಸ್ಕಂದ ಭಾಗವಹಿಸಿದ್ದು ಸ್ಕಂದ ಇವರು political Science Education and public Participation ಎಂಬ ವಿಷಯದ ಕುರಿತು ವಿಷಯ ಮಂಡನೆ ಮಾಡಿರುತ್ತಾರೆ.

15.11.2024 ತೃತೀಯ ಬಿಸಿಎ ವಿಭಾಗದ ನಿಖಿಲ್‌ಗೆ ಜಿಂದಾಲ್ ಸ್ಕಾಲರ್ಶಿಪ್ ವಿತರಿಸಲಾಯಿತು.

### ಉಚಿತ ಕೋರ್ಸ್ ನೋಂದಣಿ ಕಾರ್ಯಕ್ರಮ :

ಉಚಿತ ಕೋರ್ಸ್ ನೋಂದಣಿ ಕಾರ್ಯಕ್ರಮವು 2024 ರ ನವೆಂಬರ್ 24 ರಿಂದ 27 ರವರೆಗೆ, CSC ಅಕಾಡೆಮಿಯು ಭಾರತ ಸರ್ಕಾರದ ಅಡಿಯಲ್ಲಿ ಉಚಿತ ಕೋರ್ಸ್ ನೋಂದಣಿ ಕಾರ್ಯಕ್ರಮಗಳನ್ನು ಆಯೋಜಿಸಿತ್ತು. CSC ತನ್ನ "P2E ಕಾರ್ಯಕ್ರಮ (Passport to Earning ) ಮೂಲಕ ಗ್ರಾಮೀಣ ನಾಗರೀಕರಿಗೆ ಡಿಜಿಟಲ್ ಉತ್ಪಾದಕತೆ, ಆರ್ಥಿಕ ಜ್ಞಾನದ ಮತ್ತು ಉದ್ಯೋಗ ನಿರ್ವಹಣಾ ಸಾಮರ್ಥ್ಯಗಳ ಮೇಲೆ ಉಚಿತ ಡಿಜಿಟಲ್ ತರಬೇತಿ ಕಾರ್ಯಕ್ರಮಗಳನ್ನು ನೀಡುವ ಪ್ರಯತ್ನವನ್ನು ಪ್ರಾರಂಭಿಸಿದ್ದು. ಈ ನೋಂದಣಿ ಕಾರ್ಯಕ್ರಮದಲ್ಲಿ ಕಾಲೇಜಿನ ಬಿ.ಕಾಂನ 60ವಿದ್ಯಾರ್ಥಿಗಳು ಭಾಗವಹಿಸಿದ್ದರು.



**ಕಿರು ಪ್ರವಾಸ 20.11.2024**

ಭಾಮತಿ ವಾಣಿಜ್ಯ ಸಂಘದ ವತಿಯಿಂದ ವಾಣಿಜ್ಯ ವಿದ್ಯಾರ್ಥಿಗಳ ಒಂದು ದಿನದ ಶೈಕ್ಷಣಿಕ ಪ್ರವಾಸವನ್ನು ಮೈಸೂರು – ಚಾಮುಂಡಿ ಬೆಟ್ಟ, ಅರಮನೆ, ಮೃಗಾಲಯ. ಕೆ.ಆರ್. ಎಸ್ ಮುಂತಾದ ಕಡೆಗಳಿಗೆ ಹಮ್ಮಿಕೊಳ್ಳಲಾಗಿತ್ತು.ಉಪನ್ಯಾಸಕರಾದ ಶ್ರೀ ದಿನೇಶ್, ಅಶೋಕ್ ಕುಮಾರ್, ನಾಗರಾಜ್ , ಮಧುಸೂಧನ್,ಶ್ರೀಮತಿ ಚೈತನ್ಯ ಕು.ನಯನಾ, ಮತ್ತು 82 ವಿದ್ಯಾರ್ಥಿಗಳು ಪ್ರವಾಸದಲ್ಲಿ ಭಾಗವಹಿಸಿದರು.



**ಶಿಶುಮಂದಿರದ ಮಕ್ಕಳ ಹೊರಸಂಚಾರ 5.11.2024**

ಪ್ರಾರಂಭದಲ್ಲಿ ಮೂಡಬಿದ್ರೆಯ ಸಾವಿರಕಂಬದ ಬಸದಿಗೆ ಭೇಟಿ ನೀಡಿದ ನಂತರ ಉಪಾಹಾರ ಮುಗಿಸಿ ಕಾರ್ಕಳದ ಗೊಮ್ಮಟೇಶ್ವರ ಮೂರ್ತಿಯನ್ನು ವೀಕ್ಷಿಸಿ ನಂತರ ಕೊಡ್ಯಡ್ಕ ಅನ್ನಪೂರ್ಣೇಶ್ವರಿ ಕ್ಷೇತ್ರದಲ್ಲಿ ದೇವಿಯ ದರ್ಶನ ಪಡೆದು ಅನ್ನಪ್ರಸಾದ ಸ್ವೀಕರಿಸಿ ಹಿಂತಿರುಗಿದೆವು.

ಒಟ್ಟು 87 ಮಕ್ಕಳು ಉಪಸ್ಥಿತರಿದ್ದರು.



ಶಾಲಾಶೈಕ್ಷಣಿಕ ಪ್ರವಾಸ 12.11.2024

ಮಡಿಕೇರಿ ಪ್ರವಾಸದಲ್ಲಿ ಒಟ್ಟು 163 ವಿದ್ಯಾರ್ಥಿಗಳು 13 ಶಿಕ್ಷಕರು 2 ಎರಡು ಸಿಬ್ಬಂದಿಗಳು ಒಟ್ಟು 178 ಮಂದಿ ಭಾಗವಹಿಸಿದ್ದಾರೆ. ಭಾಗಮಂಡಲ, ತಲಕಾವೇರಿ ಗೋಲ್ಡನ್ ಟೆಂಪಲ್, ನಿಸರ್ಗಧಾಮ, ರಾಜಸೀಟ್ ಸ್ಥಳಗಳಿಗೆ ಭೇಟಿ ನೀಡಲಾಯಿತು




**ಶಾಲಾಶೈಕ್ಷಣಿಕ ಪ್ರವಾಸ 13–11–2024**

ಮಹಾಲಕ್ಷ್ಮಿ ದೇವಾಲಯ ಉಚ್ಚಿಲ, ಉಡುಪಿ ಶ್ರೀ ಕೃಷ್ಣ ಮಠ, ಕೊಲ್ಲೂರು ಮೂಕಾಂಬಿಕ ದೇವಾಲಯ, ಮುರುಡೇಶ್ವರ ಮತ್ತು ಮರವಂತೆ ಬೀಚ್, ಕುಂಭಾಶಿ ಚಂಡಿಕಾ ದುರ್ಗಾಪರಮೇಶ್ವರಿ ದೇವಾಲಯದ ಪ್ರವಾಸದಲ್ಲಿ 84 ವಿದ್ಯಾರ್ಥಿಗಳು, 9 ಶಿಕ್ಷಕರು ಒಟ್ಟು 93 ಮಂದಿ ಭಾಗವಹಿಸಿದ್ದಾರೆ

ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373
ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

ಚಿನ್ನಾಭರಣ ಸಾಲ – 11%
ಜಾಮೀನು ಸಾಲ – 16.5%
ಅಡವು ಸಾಲ – 13.5%
ವಾಹನ ಸಾಲ – 12%
ಗೃಹ ನಿರ್ಮಾಣ ಸಾಲ – 11.5%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

91ದಿನಗಳವರೆಗೆ – 7.5%
92ರಿಂದ 181 ದಿನಗಳು – 8%
182 ರಿಂದ 364 ದಿನಗಳು – 9%
1 ವರ್ಷ ಮತ್ತು ಮೇಲ್ಪಟ್ಟು – 10%

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.

Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ

KARKAN/2014/62363
Posted at Kalladka P.O.
on 10th and 15th of
Every month

Vol. : 11 Issue : 7 Rs. 10/-

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.shriramakalladka.in, www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363